# ನಿಮ್ಮೊಡನೆ

# ಪ್ರವಾಸಿಗರಿಗೆ ನೀತಿಸಂಹಿತೆ

ಸ್ವಚ್ಛಂದವಾಗಿ ವರ್ತಿಸುವ ಕೆಲವು ಪ್ರವಾಸಿಗರು ನಾಗರಿಕ ಪ್ರಜ್ಞೆಯನ್ನೇ ಮರೆತುಬಿಡುತ್ತಾರೆ. ಅಂಥವರ ಉತ್ಸಾಹದಿಂದ ವನ್ಯಮೃಗಗಳ ಜೀವನದಲ್ಲಿ ಅಸ್ತವ್ಯಸ್ತವಾಗುತ್ತದೆ. ಪ್ರಾಣಿ–ಪಕ್ಷಿಗಳ ಬದುಕಿಗೆ ತೊಂದರೆಯಾಗದಂತೆ ಪ್ರವಾಸಿಗರ ನಡವಳಿಕೆ ಶಿಸ್ತಿನ ಚೌಕಟ್ಟಿಗೆ ಒಳಪಡುವುದು ಅಗತ್ಯ. ಪ್ರವಾಸವೆಂದರೆ ಮೋಜು ಮನರಂಜನೆ ಮಾತ್ರವಲ್ಲ, ಅದೊಂದು ನಾಗರಿಕ ಜವಾಬ್ದಾರಿಯೂ ಹೌದು.

ಗೋವಾ ಸರ್ಕಾರ ತನ್ನ ಪ್ರವಾಸೋದ್ಯಮ ನೀತಿಯಲ್ಲಿ ಶಿಸ್ತು ಮತ್ತು ಸೌಂದರ್ಯವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕುತೂಹಲಕರ ನಡೆಯಾಗಿದೆ. ಗೋವಾ ಪ್ರವಾಸ ಎಂದಕೂಡಲೇ ಅನೇಕರ ಪಾಲಿಗೆ ಸ್ವೇಚ್ಛಾಚಾರದ ಚಿತ್ರಗಳು ಕಣ್ಣಮುಂದೆ ಬರುತ್ತವೆ. ಮೈ ಮರೆಯುವಂತೆ ಮದ್ಯ ಸೇವಿಸಿ ಕಡಲ ಕಿನಾರೆಗಳಲ್ಲಿ ಬಿಡುಬೀಸಾಗಿ ವಿಹರಿಸುವವರಿಗೆ ಗೋವಾ ಹೆಸರುವಾಸಿ. ಅಂಥ ನಡವಳಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ಪ್ರವಾಸೋದ್ಯಮವನ್ನು ಶಿಸ್ತಿನ ಚೌಕಟ್ಟಿಗೆ ತರಲು ಅಲ್ಲಿನ ಸರ್ಕಾರ ನಿರ್ಧರಿಸಿದೆ. ಬರುವ ಮಾರ್ಚ್ ತಿಂಗಳಿಂದ ಗೋವಾದಲ್ಲಿನ ಬೀಚ್‌ಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಸೇವನೆಗೆ ನಿರ್ಬಂಧಿಸಲಾಗಿದೆ. ಈ ನಿಯಮವನ್ನು ಉಲ್ಲಂಘಿಸುವವರು 5 ಸಾವಿರ ರೂಪಾಯಿ ದಂಡ ತೆರಬೇಕಾಗುತ್ತದೆ. ಮದ್ಯಸೇವನೆಯ ಜೊತೆಗೆ ಪ್ಲಾಸ್ಟಿಕ್ ನಿಷೇಧ ಮತ್ತು ಉಗುಳುವೀರರಿಗೆ ಕಡಿವಾಣ ಹಾಕುವುದು ನೀತಿಸಂಹಿತೆಯಲ್ಲಿ ಸೇರಿದೆ.

ಗೋವಾ ಸರ್ಕಾರದ ಕ್ರಮಗಳು ಮೇಲ್ನೋಟಕ್ಕೆ ಪ್ರವಾಸಿಗರ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನದಂತೆ ಕಾಣಿಸುತ್ತವೆ. ಇಂಥ ಕಟ್ಟುನಿಟ್ಟಿನ ಕ್ರಮಗಳಿಂದ ಕೆಲವರಿಗೆ ಕಿರಿಕಿರಿಯಾದರೂ ದೀರ್ಘಾವಧಿಯಲ್ಲಿ ಅನುಕೂಲವೇ ಆಗುತ್ತದೆ. ಕಡಲ ಕಿನಾರೆಗಳ ಲಾಲಿತ್ಯ ಹಾಗೂ ನಗರದ ಸೌಂದರ್ಯ ಆಸ್ವಾದಿಸುವವರಿಗೆ ಶಾಂತವಾದ ವೇದಿಕೆಯೊಂದು ರೂಪುಗೊಳ್ಳುವುದು ಸಾಧ್ಯವಾಗುತ್ತದೆ. ಗೋವಾದ ಈ ಪ್ರವಾಸೋದ್ಯಮ ಸಂಹಿತೆ ಇತರ ರಾಜ್ಯಗಳಿಗೂ ಮಾದರಿಯಾಗಬೇಕಿದೆ.

ಆಧುನಿಕ ಜೀವನಶೈಲಿಯಲ್ಲಿ ಪ್ರವಾಸಕ್ಕೆ ಬಹಳ ಮುಖ್ಯವಾದ ಸ್ಥಾನವಿದೆ. ದೈನಿಕದ ಜಂಜಡದಿಂದ ಪಾರಾಗಿ ಜೀವನೋತ್ಸಾಹವನ್ನು ನವೀಕರಿಸಿಕೊಳ್ಳಲಿಕ್ಕಾಗಿ ಹಾಗೂ ಅರಿವಿನ ರೂಪದಲ್ಲಿ ಯುವಜನರ ನಡುವೆ ಪ್ರವಾಸದ ಪರಿಕಲ್ಪನೆ ಜನಪ್ರಿಯವಾಗಿದೆ. ವಾರಾಂತ್ಯದ ರಜೆಗಳಲ್ಲಿ ಹಾಗೂ ಹಬ್ಬಗಳ ಸಂದರ್ಭದಲ್ಲಿ ಊರು ಸುತ್ತಲು ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಬೇಸಿಗೆ–ದಸರೆ ರಜೆಗಳ ಸಂದರ್ಭದಲ್ಲಂತೂ ಪ್ರವಾಸವಿಲ್ಲದೆ ಹೋದರೆ ರಜೆ ಅಪೂರ್ಣ ಎನ್ನುವಂತಾಗಿದೆ. ವರ್ಷದಿಂದ ವರ್ಷಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದರೆ, ಅವರಲ್ಲಿ 'ಪರಿಸರ ಪ್ರಜ್ಞೆ' ಮೂಡಿಸುವ ಚಟುವಟಿಕೆಗಳು ಮಾತ್ರ ಅಗತ್ಯಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ನಡೆಯುತ್ತಿಲ್ಲ. ಹೆಚ್ಚಿನ ಜನರ ಪಾಲಿಗೆ ಪ್ರವಾಸವೆನ್ನುವುದು ಕೇವಲ ಮೋಜು–ಮನರಂಜನೆ ಎನ್ನುವಂತಾಗಿದೆ. ಆ ಕಾರಣದಿಂದಲೇ ಚಾರಣದ ನೆಪದಲ್ಲಿ ಕಾಡು–ಮೇಡು ಸುತ್ತುವವರು ಎಲ್ಲೆಂದರಲ್ಲಿ ನೀರಿನ ಬಾಟಲಿಗಳನ್ನೂ ಮಣ್ಣಿನಲ್ಲಿ ಜೀರ್ಣವಾಗದ ಪ್ಲಾಸ್ಟಿಕ್ ತ್ಯಾಜ್ಯವನ್ನೂ ಎಸೆಯುತ್ತಾರೆ. ಅವರ ಪಾಲಿಗೆ ಪರಿಸರವೆನ್ನುವುದು ತಿಪ್ಪೇಗುಂಡಿಯಂತೆ ಬಳಕೆಯಾಗುತ್ತದೆ. ನದಿಗಳನ್ನೂ ಜಲಪಾತಗಳನ್ನೂ ಕಲುಷಿತಗೊಳಿಸುತ್ತಾರೆ. ಅಪಾಯಕರ ಸ್ಥಳಗಳಲ್ಲಿ ಸೆಲ್ಫಿ ತೆಗೆದುಕೊಳ್ಳಲು ಹೋಗಿ ಜೀವಕ್ಕೆ ಅಪಾಯ ತಂದುಕೊಳ್ಳುತ್ತಾರೆ.

ಸ್ವಚ್ಛಂದವಾಗಿ ವರ್ತಿಸುವ ಕೆಲವು ಪ್ರವಾಸಿಗರು ನಾಗರಿಕ ಪ್ರಜ್ಞೆಯನ್ನೇ ಮರೆತುಬಿಡುತ್ತಾರೆ. ಅಂಥವರ ಉತ್ಸಾಹದಿಂದ ವನ್ಯಮೃಗಗಳ ಜೀವನದಲ್ಲಿ ಅಸ್ತವ್ಯಸ್ತವಾಗುತ್ತದೆ. ಪ್ರಾಣಿ–ಪಕ್ಷಿಗಳ ಬದುಕಿಗೆ ತೊಂದರೆಯಾಗದಂತೆ ಪ್ರವಾಸಿಗರ ನಡವಳಿಕೆ ಶಿಸ್ತಿನ ಚೌಕಟ್ಟಿಗೆ ಒಳಪಡುವುದು ಅಗತ್ಯ. ಪ್ರವಾಸವೆಂದರೆ ಮೋಜು ಮನರಂಜನೆ ಮಾತ್ರವಲ್ಲ, ಅದೊಂದು ನಾಗರಿಕ ಜವಾಬ್ದಾರಿಯೂ ಹೌದು ಎನ್ನುವ ಅರಿವನ್ನು ಮೂಡಿಸಲು ಇದು ಸಕಾಲ. ಪ್ರವಾಸದ ಜೊತೆಗೆ ನಾಗರಿಕ ಪ್ರಜ್ಞೆಯನ್ನೂ ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ಕಠಿಣ ಕಾನೂನುಗಳೂ ಅಗತ್ಯ. ಪ್ರವಾಸಿಗರ ಸಂತೋಷಕ್ಕೆ ಮುಕ್ತ ಅವಕಾಶವಿದ್ದೂ, ಆ ಸಂತೋಷ ಸ್ವಹಿತ ಹಾಗೂ ಪರಿಸರದ ಹಿತಕ್ಕೆ ಮಾರಕವಾಗದಂತೆ ಎಚ್ಚರವಹಿಸುವುದು ಅಗತ್ಯ. ನಮ್ಮ ಪ್ರವಾಸೋದ್ಯಮ ನೀತಿಯ ಭಾಗವಾಗಿ ಪರಿಸರ ಸಂರಕ್ಷಣೆಯೂ ಸೇರ್ಪಡೆಯಾಗಬೇಕು. ಈ ನಿಟ್ಟಿನಲ್ಲಿ ಗೋವಾ ಸರ್ಕಾರದ ಚಿಂತನೆ ಆರೋಗ್ಯಕರವಾಗಿದೆ. ಪರಿಸರ ಉಳಿದರೆ ಪ್ರವಾಸೀ ತಾಣವೂ ಉಳಿಯುತ್ತದೆ ಎನ್ನುವ ಸಾಮಾನ್ಯ ಪ್ರಜ್ಞೆ, ಸಾಮಾಜಿಕ ಎಚ್ಚರವನ್ನು ನಾವು ರೂಢಿಸಿಕೊಳ್ಳಬೇಕು.

ಕರ್ನಾಟಕದಲ್ಲಿ ಕೂಡ ಪರಿಸರಕ್ಕೆ ಪೂರಕವಾದ ಪ್ರವಾಸೋದ್ಯಮದ ಚಟುವಟಿಕೆಗಳು ನಡೆದಿವೆ. 'ಕರ್ನಾಟಕ ಎಕೊ ಟೂರಿಸಂ' ಹೆಸರಿನಲ್ಲಿ ಪರಿಸರ ಪ್ರವಾಸೋದ್ಯಮವನ್ನು ಜನಪ್ರಿಯಗೊಳಿಸಲು ಅರಣ್ಯ ಇಲಾಖೆ ಪ್ರಯತ್ನಿಸುತ್ತಿದೆ.

'ಜವಾಬ್ದಾರಿಯುತ ಪ್ರವಾಸ ಪರಿಸರ ಸಂರಕ್ಷಣೆಯ ಜೊತೆಗೆ ಸ್ಥಳೀಯ ಜನರ ಹಿತಾಸಕ್ತಿಯ ಬದ್ಧತೆಯನ್ನೂ ಹೊಂದಿರಬೇಕು' ಎನ್ನುವುದು ಅಂತರರಾಷ್ಟ್ರೀಯ 'ಎಕೊ ಟೂರಿಸಂ ಸೊಸೈಟಿ'ಯ ಪ್ರತಿಪಾದನೆ. ಇದು ವೈಯಕ್ತಿಕ ಬದ್ಧತೆ ಆಗುವುದರ ಜೊತೆಗೆ ಸಾಮಾಜಿಕ ಹಾಗೂ ಆಡಳಿತಾತ್ಮಕ ಎಚ್ಚರವಾಗುವ ಅಗತ್ಯವಿದೆ.

■ ರಘುನಾಥ ಚ.ಹ.



ಈಶ್ವರ್